ಅಧ್ಯಕ್ಷರು :— ಯಾವುದೋ ಪ್ರಶ್ನೆ, ಯಾವುದೋ ಉಪ ಪ್ರಶ್ನೆ, ಮಂತ್ರಿ ಎಂದರೆ ಅವರೇನು ದೇವರೇ. ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಹೇಳಿದರೆ ನಮಗೆ ಸಾಕಾಗುತ್ತೆ. ಇನ್ನು ಸಂಬಂಧ ಇಲ್ಲದೇ ಇರುವುದನ್ನೆಲ್ಲಾ ಕೇಳಿದರೆ, ಅವರು ಹೇಳಿದಹಾಗೆಯೇ ಇದೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ವಿದ್ಯುತ್ ಕೊರತೆಯಿಂದ ಆ ರಿಸರ್ಚ್ ಫಾರ್ಮ್‌ಗೆ ತೊಂದರೆಯಾಗುತ್ತಾ ಇದೆ.

ವಿಟ್ಲ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆ.

201(1481) ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಟ್ಲ ವಿಧಾನಸಭಾ ಕ್ಷೇತ್ರದ ಏತ ನೀರಾವರಿ ಯೋಜನೆಯು ಸ್ಥಳೀಯ ರೈತರಿಗೆ ಪ್ರಯೋಜನೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಬಂದಿದೆ.

ಆ) ಈ ಯೋಜನೆಯನ್ನು (ಸಜೀಪ ಮುನ್ನೂರು ಏತ ನೀರಾವರಿ ಯೋಜನೆ) ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನ ಆಯವ್ಯಯದಲ್ಲಿ 10.00 ಲಕ್ಷ ರೂ. ಎಂದು ನಿಗದಿಪಡಿಸಿದ್ದು, ಸದರಿ ಕೆಲಸಕ್ಕೆ 3.00 ಲಕ್ಷ ರೂ.ಗಳ ಅನುದಾನದೊಂದಿಗೆ ಸೇರ್ಪಡೆಯಾಗಿದೆ. ಸದರೀ ಕಾಮಗಾರಿಯ ದುರಸ್ತಿಗಾಗಿ ರೂ. 6.40 ಲಕ್ಷಗಳಿಗೆ ಅಧೀಕ್ಷಕ ಅಭಿಯಂತರರು ದಿ: 13-11-98 ರಂದು ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಿದ್ದು, ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ ಮತ್ತು ಏಪ್ರಿಲ್ 99ಕ್ಕೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಶ್ರೀ ಎ. ರುಕ್ಕಯ್ಯ ಪೂಜಾರಿ :— ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಸಜೀಪ ಮುನ್ನೂರು ಏತ ನೀರಾವರಿ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಈ ಹಿಂದೆ ಕೂಡ ವಿಧಾನ ಸಭೆಯಲ್ಲಿ ಈ ವಿಚಾರವಾಗಿ ಹಲವಾರು ಸಲ ಪ್ರಸ್ತಾಪ ಮಾಡಿದ್ದೇನೆ. ಆದರೆ, ಇನ್ನೂ ಕೂಡ ಸುಧಾರಣೆಯಾಗಿಲ್ಲ. ಅದರ ಪರಿಸ್ಥಿತಿ ಹಾಗೆಯೇ ಉಂಟು. ಈ ದಿನ ಅವರು ಕೊಟ್ಟಿರತಕ್ಕ ಉತ್ತರವೂ ಹಾಗೆಯೇ ಇದು, ಅದು ಕೂಡ ನಮ್ಮನ್ನು ಕನ್‌ಫ್ಯೂಸ್ ಮಾಡುತ್ತಿದೆ. ಈ ಯೋಜನೆಯನ್ನು ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನ ಆಯವ್ಯಯದಲ್ಲಿ 10.00 ಲಕ್ಷ ರೂಪಾಯಿಗಳ ನಿಗದಿಪಡಿಸಿದ್ದು, ಸದರಿ ಕೆಲಸಕ್ಕೆ

3 ಲಕ್ಷ ರೂಪಾಯಿಗಳ ಅನುದಾನದೊಂದಿಗೆ ಸೇರ್ಪಡೆಯಾಗಿದೆ ಮತ್ತು 6.40 ಲಕ್ಷ ರೂಪಾಯಿಗಳಿಗೆ ಅಧೀಕ್ಷಕ ಅಭಿಯಂತರರು ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ. ಇದೇ ನಮಗೆ ಕನ್ ಫ್ಯೂಸ್ ಮಾಡುತ್ತಿದೆ, ಇದೇನೆಂದು ನಮಗೆ ಗೊತ್ತಾಗುವುದಿಲ್ಲ. ಇದು ಸುಮಾರು 400 ಎಕರೆಗೆ ನೀರು ಕೊಡುವಂಥ ಯೋಜನೆ. ಆದರೆ, ಇವತ್ತು ಕೇವಲ 25 ಎಕರೆಗೆ ಮಾತ್ರ ನೀರು ಕೊಡುತ್ತಿದ್ದಾರೆ. ಅಷ್ಟು ಹಾಳಾಗಿದೆ ಮತ್ತು ಅದನ್ನು ವಿಸ್ತರಣೆ ಕೂಡ ಮಾಡಿಲ್ಲ. ನಾನು ಹಿಂದೆ ಕೂಡ ಪ್ರಸ್ತಾಪ ಮಾಡಿದ್ದೇನೆ. ನನಗೆ ಸರ್ಕಾರದಿಂದ ಇಷ್ಟೇ ಉತ್ತರ ಬೇಕು. ಈ ಏತ ನೀರಾವರಿ ಯೋಜನೆಯನ್ನು ಪೂರ್ತಿ ದುರಸ್ತಿ ಮಾಡಬೇಕು. ಈ ಯೋಜನೆಯು 400 ಎಕರೆಗಿಂತ ಮಿಕ್ಕಿ ನೀರು ಕೊಡುವಂಥ ಯೋಜನೆ ಅದು. ಇಷ್ಟು ಜಮೀನಿಗೆ ವಿಸ್ತರಣೆ ಮಾಡಿಕೊಡಬೇಕು ಮತ್ತು ಇದಕ್ಕೆ ಹಣವನ್ನು ಒದಗಿಸಿಕೊಡಬೇಕು. ಸುಮಾರು ಒಂದು ಕೋಟಿ ರೂಪಾಯಿನಷ್ಟು ಹಣವನ್ನು ಕೊಟ್ಟರೆ, ಆ ಯೋಜನೆಯನ್ನು ಪೂರ್ತಿ ಮಾಡಲಿಕ್ಕೆ ಆಗುತ್ತದೆ. ಇದರ ಸಂಬಂಧವಾಗಿ ಮಾನ್ಯ ನಾಗೇಗೌಡರು ಒಂದು ಉತ್ತರ ಕೊಟ್ಟಿದ್ದಾರೆ. ನೇತ್ರಾವತಿ ನದಿಯಿಂದ ನೀವು ಹಾವೇರಿಗೆ ನೀರು ಕೊಂಡುಹೋಗುತ್ತಿದ್ದೀರಿ. ಆ ಯೋಜನೆ ತಯಾರು ಮಾಡುತ್ತಿದ್ದೀರಿ. ನೇತ್ರಾವತಿ ಬಡವರಿಗಾಗಿ ಕೊಡುವಂಥ ಯೋಜನೆ ಇದ್ದೂ ಕೂಡ, ಅದು ಸರಿಯಿಲ್ಲವೆಂದು ಹೇಳಿದರೆ, ಅದರ ಬಗ್ಗೆ ಏನೆಂದು ನನಗೆ ಅರ್ಥವಾಗುವುದಿಲ್ಲ. ಅದಕ್ಕಾಗಿ, ಸನ್ಮಾನ್ಯ ಅಧ್ಯಕ್ಷರ ಮೂಲಕ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ. ಈ ವರ್ಷ ಕಡೇಪಕ್ಷ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿ, ವಿಟ್ಲ ಏತ ನೀರಾವರಿ ಯೋಜನೆಯನ್ನು ದುರಸ್ತಿ ಮಾಡಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ :— ಈ ವಿಟ್ಲ ಹಾಮಗಾರಿಗೆ ಈಗಾಗಲೇ ನಾವು ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಿದ್ದೇವೆ. ಒಂದು ತಿಂಗಳೊಳಗೆ ಆ ಕೆಲಸ ಪೂರ್ತಿಯಾಗುತ್ತದೆ ಎಂಬ ಮಾಹಿತಿ ನನ್ನ ಹತ್ತಿರ ಇದೆ. ಇವರು ಹೇಳುವ ಪ್ರಕಾರ ಒಂದು ಕೋಟಿ ರೂಪಾಯಿ ಎಂದು ಹೇಳಿದರೆ, ನಾನು ಇನ್ನೊಂದು ಸಾರಿ ಅದನ್ನು ವಿಮರ್ಶೆ ಮಾಡಿ, ಈಗೇನು ನಾವು ಪ್ರಾರಂಭ ಮಾಡಿರತಕ್ಕ ಹಾಮಗಾರಿ ಮುಂದಿನ ತಿಂಗಳಲ್ಲಿ ಕೊನೆಯಾಗುತ್ತದೆ. ಆದರೆ, ಅವರು ಹೇಳಿರುವ ಪ್ರಕಾರ, ಇನ್ನೊಂದು ಸಾರಿ ವೆರಿಫೈ ಮಾಡಿಸುತ್ತೇನೆ. ಅಷ್ಟು ಹಣ ಬೇಕಾದರೂ ಸಹ, ಮುಂದಿನ ವ್ಯವಸ್ಥೆಯಲ್ಲಿ ನಾನು ಚಿಂತನೆ ಮಾಡುತ್ತೇನೆ.

ಶ್ರೀ ರುಕ್ಮಯ್ಯ ಪೂಜಾರಿ :— ಈಗ ಕೊಡುವಂಥ ಹಣ ಏನೇನೂ ಸಾಲದು. ನೀವು ಹೇಳಿದ ಹಾಗೆ ಪುನಃ ಪರಿಶೀಲನೆ ಮಾಡಿ, ಅದಕ್ಕೆ ಬೇಕಾದಷ್ಟು ಹಣ ಕೊಟ್ಟರೆ, ನಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮೈಸೂರು ಗಂಧದ ಎಣ್ಣೆ ಕಾರ್ಖಾನೆ ಕೊಳ್ಳುವ ಗಂಧದ ಕಟ್ಟಿಗೆ ಕುರಿತು.